www.prepp.in

Administrator
KPTCL Accounts Officers' ...
No. 28, Race Course Cross ...
A. R. Circle, Ban...

Prepp
Your Personal Exams Guide



Karnataka Power Transmission Corporation Limited

Departmental Examination – October, 2012

SAS PART I – PAPER I

(English/Kannada Precis Writing & drafting)

(Books, Guides, Notes etc., are not allowed)

Date: 16th October, 2012 (Maximum Marks:100) Time: 9.30 am to 12.30 pm

---

## PART-'A'

1. Write a précis of the following Passage in your words with a suitable title.

25

THE END OF MAN, SAID CARLYLE LONG AGO, IS ACTION AND not thought, though it be of the noblest. Is it not logical, after all, that what man knows or thinks to be right should find expression in what he actually does? If we go on thinking and contemplating about the rights and wrongs of a particular course of action and do nothing practical, we might earn the reputation of being ivory-tower philosophers and that would be all. Total absorption with the thought processes and continual weighing in mind of the pros and cons of a concrete step or manifestation would bring little gain; it would be very much like a vain search for the truth in a vacuum. Such a search in characteristic of saints and sages; it would ill-become the citizens of today who have to fulfil a host of duties and responsibilities. In modern life, man lives by actions, not by ideas, though thoughtless actions often prove dangerous and even disastrous. In the ultimate analysis, mere contemplation signifies indolence, while activity indicates life and speed, both of which ensure gains. In the divine account-books, Mahatma Gandhi warned us, only our actions are noted, not what we have read or what we have spoken or thought of. Man's actions are the best interpreters of his thoughts; nothing else can be a sure index.

Pandit Jawaharlal Nehru, eminent thinker and also, by common consent, a man of action, knew very well the near-fatal weakness of the Indian people. "Our chief defect", he said, "is that we are more given to talking about things than to doing them." Even though we are quite familiar with the theory of karma, we are prone to believe that our destiny is already ordained, and written in our "kismet". There are countless people in this country who just lie low, waiting for something to happen and also waiting for someone to give them food and succour. They believe that since they are also God's creatures, the Almighty Himself would provide them the various means of subsistence. But they get a rude shock when they starve day after day and find that they have a fend for themselves, to do whatever they can and leave the rest to God. There are also those who are so indolent as to leave even the thinking to other people. Such people indulge in even greater self-deception.

www.prepp.in

Prepp
Your Personal Exams Guide



The author of the dictum "Life is action, not contemplation" was no less a person than Goethe himself. He was known to be a great dreamer and thinker, but he also realised that it is action alone that can lead to a nation's salvation. Apparently, he was thinking of contemplation in the narrow sense and action in the broad sense. He was reproaching the dreamers and idlers who do nothing and are a burden to society. In India we have the theory of action called the Karma Yoga. This theory, however, does not exclude fruitful contemplation. It disapproves of only such contemplation as leads nowhere and merely promotes lethargy and inaction. Plato, the famous Greek Philosopher, provided an excellent example of a thinker who indulged constantly in the game of ideas and ideologies; he put across certain beliefs and theories and he was convinced that ideas move and transform the world. While great philosophers, after prolonged periods of meditation and contemplation, impart ideas to mankind, those who put such ideas into action are equally great men. It is also well to remember that some ideas may appear fanciful and impracticable initially, but in course of time they lead to marvellous inventions which relieve human misery and distress on a wide scale. There is the classic example of Newton who gazed at the stars and the sky so often and so persistently that people thought he was crazy and a drudge. But it was his endless contemplation that gave to the world the theory of gravity and other invaluable discoveries that changed the outlook of mankind and made it more scientific minded.

Whenever anyone deplores the habit of endless thinking, without translating most such thoughts into action, one is reminded of the classic example of Hamlet who was constantly contemplating action but was so engrossed in his thoughts that he lost several opportunities of taking concrete action by way of revenge on the wrong doer and then he regretted his lethargy. When he did act, it was too late and he actually lost his life. All this made Shakespeare's Hamlet a great and highly effective tragedy of an aggrieved hero who thought much but did little.

We have also to examine another aspect of this question-good acts and bad acts, which are preceded in turn by good thoughts and evil thoughts. If human thoughts are evil in nature and designed to harm or destroy others, the consequent actions will also be wholly undesirable and uncalled for. Melancholy thoughts and general pessimism do not lead to beneficial actions. It was the generally pessimistic and gloomy outlook that promoted such sad thoughts in Hamlet's mind: "The earth seems to me a sterile promontory...... this majestic roof fretted with golden fire, why, it appears no other thing to me than a foul and pestilent congregation of vapours". In a fit of despair, Hamlet even described Man as "the quintessence of dust". A jaundiced eye, it is said, can never become men of action. Gloomy thoughts shut out all views of joy and happiness in human life and also of all virtues of man. So at times they prompt men and women to kick the bucket to get rid of everything in the totally erroneous belief that they can find happiness in the next world. If they had acted, they would have found relief, not only in creation but also in relieving boredom and promoting happiness around them.

www.prepp.in

Prepp
Your Personal Exams Guide



As to the question who deserves the greater credit for the progress of the world-the thinkers or the men of action-it all depends upon what the thoughts and actions were. But generally it would be fair to give the credit to both and in more or less equal measures. All earnest thinkers deserve veneration. It is true that thoughts and contemplation show the way and open up vast possibilities for the welfare of mankind, but unless there is concrete action there can be no additions to practical knowledge or to human achievement. Both thinkers and actors have their due roles to play; the point is that unless there are concrete actions, thinking processes serve little purpose. So Goethe's dictum is no more than a half-truth.

Success is also closely linked with action. Only those who dare and act can hope to make a mark in life; success seldom comes to those who are timid and ever afraid of the consequences of acting speedily, and therefore, continue to remain in a state of hibernation. Action does mean risk, but then it adds to the zest and delight of life. Mental flabbiness and virtual paralysis indicate lack of success. We must also deplore the complacent attitude of those who, out of sheer sloth, console themselves by quoting the dictum: "Whatever is worth knowing is already known and whatever is worth doing has already been done", which as Pandit Nehru cautioned, is perilous nonsense.

In sum, action has to be there in all walks of life but it cannot be divorced from thought; it should rather flow from it as if in a logical sequence. The urge to action and the desire to experience life through action influences the thoughts and activity of all men who make a mark in life. Abstract thinking not followed by concrete manifestation naturally proves barren. So the greatest satisfaction to man comes through a happy and fruitful synthesis of thought and action.

**2. Read the following passage and answer the questions that follows:**

**15**

A certain number of ladies and gentlemen from the United States of America came to India on a pleasure trip. Among the many cities that they visited, Calcutta was the one that left an impression on their minds which lasted for a long time. They arrived at Calcutta-the biggest city in the country-about the middle of the month of October. At this time of the year almost all the Hindus in west Bengal are busy with 'Durga Puja'. The party of Americans saw that a great many of the shops were closed. Almost all Government offices, schools and colleges were also closed on account of Durga Puja holidays. On the last day of these holidays the tourists were amazed to see an extraordinary large crowd of men, women, and children, consisting of more than a hundred thousand individuals, forming procession and following a big idol which appeared to be made of silver and bedecked in jewels which must have cost a very large sum of money. This was the idol of the Goddess Durga. The Americans took a very keen interest in the procession which impressed them deeply . They a expressed their great and sincere admiration for the devotion and faith of the worshippers of the Goddess Durga. But they could not understand why such a beautiful idol, which

www.prepp.in



had cost the Bengalis so much money, and which they held in high esteem, should have been thrown into the river Hooghly.

A) A certain number of ladies and gentlemen from the United States of America came to India .....................

(a) On a hunting expedition. (b) on a pleasure trip.
(c)On a study tour. (d)to enjoy sight-seeing
(e) The Passage does not tell us.

B) Almost all Government offices, schools, and colleges were closed ...............
(a) because it was very cold.
(b) on account of Durga puja holidays
(c) because of General Elections in the country.
(d) because people had gone on strike.
(e) the passage does not tell us.

C). The American tourists were amazed to see...............
(a) Such a big city as Calcutta. (b) so many large buildings
(c) the idol of the Goddess Durga.
(d) a very large procession following a big idol.
(e) the passage does not tell us.

D). The Americans expressed their great and sincere admiration for the .........
(a) beautiful idol. (b) hospitality of Bengalis.
(c) devotion and faith of worshippers of the Goddess Durga.
(d) faithfulness of Indian women.
(e) religious beliefs of the Indians.

E). Write the sentence from the passage which expresses the Americans surprise at what they saw on the last day of the Durga Puja holidays.

**3.** Choose the right word given in the bracket: **10**

1. Shoes made of (canvas, canvass)are not durable
2. Can you (cite, site) an example in favour of your argument?
3. The prisoner was set at (freedom, liberty)
4. Who is the (honorary, honourable) secretary of your club?
5. He put her (Metal, mettle) to the test.
6. Can you quote any (precedent, president) in your favour?
7. This is a (knotty, naughty) problem
8. The calm often (precedes, proceeds) the storm
9. Asoka's (rain, rein, reign) was full of peace
10. In the olden days people believed that the earth was (stationary, stationery)

www.prepp.in



## PART - B

4. Controller of BESCOM, Chitradurga zone during his routine inspection has observed that the safe custody and periodical examination of duplicate cash chest keys, have not been done as per Accounts Manual instructions. Draft a circular instructions to all concerned within his jurisdiction for needful action. 5

5. DCA Transmission (W & M) circle, Davanagere, during his inspection of Divisions has observed that assets are not categorised timely as per rules and guidelines. Draft a letter to jurisdiction Divisions, for needful action. 5

6. Assistant Executive Engineer (ele.,) Peenya Sub Division has observed that R.R dockets details are not entered in the prescribed registers and not handed over in time to Revenue section. In turn Revenue Section is also not taking timely action in opening ledger accounts. Draft instructions letter to all concerned in the matter. 5

7. Draft a Notification to be issued by SEE Transmission ( W & M) circle, Davanagere, inviting short term E-tenders for providing shift and minor maintenance works in the 55 numbers of 66/11KV substations in his circle jurisdiction from qualified contractors for a period of one year from 1-11-2012 to 31-10-2013. 10

8. Draft a circular from FA (A & R) KPTCL Bangalore to disburse salary and all other allowances to all officers/employees of KPTCL/ESCOMs strictly through Bank Accounts. 5

9. Draft a circular from the Director (A & HR) with necessary instructions in the matter to all the officers/employees to declare information of their movable/immovable assets and liabilities for the calendar year 2012 within stipulated time as per KEB employees service (conduct) rules 1988 section 23. 5

10. Draft a DO letter from Director (Technical), KPTCL to all the Chief Engineers (Ele), Transmission Zones to personally follow up the work of commissioning of stations and to ensure that the targeted commissioning of 300 stations of various voltage classes during 2012-13 is achieved. In this endeavour they should programme for commissioning stations every alternative day and to send compliance report by DO to Director (Tech) by every week end. 5

11. Issue a recall notice to duty to sri. Xyz, lineman of telephone section of TL & SS Division Haveri, who is in the habit of remaining absent frequently and now absent from duty from 02.02.2012, without information. 5

www.prepp.in

Prepp
Your Personal Exams Guide



12. A Junior Assistant of Transmission (W & M) circle, Tumkur, in charge of despatch section has not maintained stamp register properly and daily balances have not been put up. Further during inspection, shortage of stamp has been found. Issue a show cause notice in the matter. 5

## ಕನ್ನಡ

### ಭಾಗ – ಎ

**1) ಈ ಕೆಳಗಿನ ಲೇಖನವನ್ನು ಓದಿ 3ನೇ ಒಂದರಷ್ಟಕ್ಕೆ ಸೀಮಿತಗೊಳಿಸಿ ಬರೆಯಿರಿ ಮತ್ತು ಸೂಕ್ತ ಶಿರೋನಾಮ ಬರೆಯಿರಿ: 25**

ಓದುವುದು, ಓದಿ ಆನಂದಿಸುವುದು ಒಳ್ಳೆಯ ಹವ್ಯಾಸ. ಅದೊಂದು ಕಲೆ ಕೂಡಾ. ಓದುವುದರಲ್ಲಿ ಸಿಗುವ ಆನಂದ ಬೇರೆ ಯಾವುದರಲ್ಲೂ ಸಿಗದು ಎಂಬುದು ತಜ್ಞರ ಅಭಿಪ್ರಾಯ. ಓದಿ ಅಧ್ಯಯನ ಮಾಡಿ ಒಬ್ಬಾತ ಅಪಾರ ಅನುಭವವನ್ನು ಗಳಿಸಿಕೊಳ್ಳಬಹುದು. ಅನೇಕ ವಿಚಾರಗಳನ್ನು ತಿಳಿದುಕೊಳ್ಳಬಹುದು.

ಕೆಲವರಿಗೆ ಯಾವುದೇ ಪುಸ್ತಕವನ್ನು ಐದು – ಹತ್ತು ನಿಮಿಷ ಕಾಲ ಓದಿದರೂ ಬೇಸರ ಬಂದು ಬಿಡುತ್ತದೆ. ಇನ್ನೂ ಕೆಲವರಿಗೆ ಪುಸ್ತಕವನ್ನು ಬೇಗ ಮುಗಿಸಲು ಆಗದು. ನಿಧಾನವಾಗಿ ಓದಿ ಮುಗಿಸುತ್ತಾರೆ. ಯಾವುದೇ ಪುಸ್ತಕಗಳು ಒಳಗೊಂಡಿರುವ ವಿಚಾರಗಳನ್ನು ಓದಿ ಅರ್ಥಮಾಡಿಕೊಂಡಿರುವವನಿಗೆ ಆ ವಿಚಾರಗಳು ಅರ್ಥವಾಯಿತೇ ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ತಜ್ಞರ ಪ್ರಕಾರ ಅವಸರದ ಓದು ಒಳ್ಳೆಯದಲ್ಲ. ಅವಸರದ ಓದಿನಲ್ಲಿ ಅನೇಕ ವಿಚಾರಗಳು, ಅಂಶಗಳು ಓದುಗರ ಅರಿವಿಗೆ ಬಾರದೇ ತಪ್ಪಿ ಹೋಗಬಹುದು.

ಓದು ಕಲಿಸಲು ಮುಖ್ಯವಾಗಿ ಮಕ್ಕಳು ವಯಸ್ಸು, ಬುದ್ಧಿಮಟ್ಟ, ಭಾಷಾ ಸಾಮಾರ್ಥ್ಯ, ದೈಹಿಕ ಹಾಗೂ ಮಾನಸಿಕ ಆರೋಗ್ಯ, ಪರಿಸರ, ಆಸಕ್ತಿ, ಮನೆಯ ವಾತಾವರಣ ಇತ್ಯಾದಿ ಅನೇಕ ಅಂಶಗಳನ್ನು ಪರಿಗಣಿಸಬೇಕಾಗುವುದು. ಶುದ್ಧವಾದ ಓದು ಯಾವುದೆಂದರೆ ಸ್ವರಭಾರ, ದನಿಯ ಏರಿಳಿತ, ಸ್ಪಷ್ಟ ಉಚ್ಚಾರ, ವಿರಾಮ ಚಿಹ್ನೆಗಳ ಕಡೆಗೆ ಗಮನ ಇತ್ಯಾದಿ ಅಂಶಗಳನ್ನು ಲಕ್ಷಿಸುವುದು ಎಂಬುದು ತಜ್ಞರ ಅಭಿಪ್ರಾಯವಾಗಿದೆ. ಪ್ರಾರಂಭದಲ್ಲಿ ಮಕ್ಕಳನ್ನು ಶಾಲೆಗೆ ಹೊಂದಿಕೊಳ್ಳುವಂತೆ ಮಾಡಲು ಕಥೆ ಹೇಳುವುದು, ಹಾಡು ಹಾಡಿಸುವುದು ಹಾಗೂ ಇನ್ನಿತರ ಪಠ್ಯೇತರ ಚಟುವಟಿಕೆಗಳತ್ತ ಗಮನಹರಿಸಿ ಓದನ್ನು ಪ್ರೀತಿಸುವಂತೆ ಮಾಡಬೇಕು. ಓದು ವಿದ್ಯಾರ್ಥಿಯ ಸಂಗಾತಿಯಂತಿರಬೇಕು.

ಓದಿನಲ್ಲಿ ಹಿಂದುಳಿದವರು ಈ ಎಲ್ಲ ಅಂಶಗಳತ್ತ ಗಮನಹರಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ದೃಢವಾದ ಸಂಕಲ್ಪವಿರಬೇಕು. ಕಲಿಯಬೇಕೆನ್ನುವ ಹಂಬಲ ಮತ್ತು ಕಲಿಯುವೆ ಎಂಬ ಆತ್ಮವಿಶ್ವಾಸ ಹುಟ್ಟದಿದ್ದರೆ ಓದಿನಲ್ಲಿ ಅಭಿರುಚಿ ಹುಟ್ಟುವುದಿಲ್ಲ. ಎಷ್ಟು ಓದಿದರೂ ಜ್ಞಾಪಕದಲ್ಲೇ ಉಳಿಯುವುದಿಲ್ಲ ಎಂದು ಪುಸ್ತಕವನ್ನು ಎಸೆಯುವ ಬದಲು ಓದಿ ಸ್ಮರಣಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಬೇಕು.

ಏನು ಓದಿದರೂ ಅದು ಅರ್ಥವಾಗಬೇಕು. ಮುಖ್ಯವಾಗಿ ಓದುವವನಲ್ಲಿ ಚರ್ಚಿಸುವ ಮತ್ತು ಶೋಧಿಸುವ ಮನೋಭಾವವಿರಬೇಕು. ಕೇವಲ ಒಂದೇ ಬಾರಿಗೆ ಎಲ್ಲವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಉತ್ಸಾಹವಿಲ್ಲದಿದ್ದರೆ,ಆಸಕ್ತಿಯಿಲ್ಲದಿದ್ದರೆ, ಓದಿದ್ದು ತಲೆಗೆ ಹತ್ತದು. ಯಾರಾದರೂ ಏನು ಓದಿದರೂ ತಲೆಗೆ ಹತ್ತುವುದಿಲ್ಲ ಎಂದರೆ ಆತ ದಡ್ಡ ಎಂದು ಭಾವಿಸಬೇಕಾಗಿಲ್ಲ. ಬಹುಶ: ಅವನಲ್ಲಿ ಓದುವುದರಲ್ಲಿ

www.prepp.in



ಆಸಕ್ತಿಯಿಲ್ಲದಿರುವುದೂ ಓದು ತಲೆಗೆ ಹತ್ತದಿರುವುದಕ್ಕೆ ಒಂದು ಕಾರಣವಾಗಿರಬಹುದು. ಒಂದು ಪುಸ್ತಕವನ್ನು ಎಷ್ಟು ಬೇಗ ಓದಿ ಮುಗಿಸಿದೆ ಎನ್ನುವುದು ಮುಖ್ಯವಾಗಬಾರದು. ಓದಿದ್ದು ಎಷ್ಟು ಅರ್ಥವಾಗಿದೆ ಎನ್ನುವುದು ಮುಖ್ಯವಾಗಬೇಕು.

ಮೊದಮೊದಲು ಓದುವುದು ನಿಧಾನ ಎನಿಸಬಹುದು. ಆದರೆ ಮುಂದೆ ಓದಿನಲ್ಲಿ ವೇಗ ಬರುತ್ತದೆ. ಮೊದಲ ಬಾರಿಗೆ ಒಂದು ಕೃತಿಯನ್ನು ಓದುವಾಗ ಹೆಚ್ಚುವೇಳೆ ಬೇಕಾಗಬಹುದು. ಆದರೆ ಎರಡನೇ ಬಾರಿಗೆ ಅಷ್ಟು ಸಮಯ ಬೇಕಾಗುವುದಿಲ್ಲ. ಅನೇಕ ವಿದ್ಯಾರ್ಥಿಗಳು ಹೆಚ್ಚಾಗಿ ಪರೀಕ್ಷೆಯ ಸಮಯದಲ್ಲಿ ಕಣ್ಣು ಕೆಂಪಗೆ ಮಾಡಿಕೊಂಡು ಓದಲು ಪುಸ್ತಕ ರಾಶಿಯ ಮಧ್ಯೆ ಕುಳಿತುಬಿಡುತ್ತಾರೆ. ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿಯು ತಾನು ಕಷ್ಟಪಟ್ಟು ಓದಲಿಲ್ಲ ಎನ್ನುವುದಕ್ಕಿಂತ ಶಿಕ್ಷಕರು ಸರಿಯಾಗಿ ಕಲಿಸಲಿಲ್ಲ. ಇಲ್ಲವೇ ತಾನು ನಿರೀಕ್ಷಿಸಿದ ಪ್ರಶ್ನೆಗಳು ಬರಲಿಲ್ಲ ಎಂದು ಹೇಳುತ್ತಿರುತ್ತಾನೆ. ಮನಸ್ಸಿನಲ್ಲಿ ನೆಮ್ಮದಿ ಇಲ್ಲದಿದ್ದರೂ ಕೂಡಾ ಕಲಿಕೆ ಕುಂಠಿತವಾಗುತ್ತದೆ.

ವಿದ್ಯಾರ್ಥಿಗಳು ತಾವು ಓದಿದ್ದನ್ನು ಪೂರ್ಣವಾಗಿ ಗ್ರಹಿಸಿಕೊಳ್ಳದಿದ್ದರೆ ಏನೂ ಪ್ರಯೋಜನವಾಗದು. ಓದಿದ ಭಾಗದ ಯಾವುದೇ ಮುಖ್ಯ ಶೀರ್ಷಿಕೆ, ಭಾಗ, ಮುಖ್ಯ ವಾಕ್ಯಗಳು, ಚಿತ್ರಗಳು ಮುಂತಾದವುಗಳನ್ನು ಮನಸ್ಸಿನಲ್ಲಿ ಅಚ್ಚೊತ್ತಿಕೊಳ್ಳಬೇಕು. ಅಂತಹ ನೆನಪು ಮನದಲ್ಲಿ ನೆಟ್ಟಿದ್ದರೆ ಸಮಯ ಬಂದಾಗ ಆದರ ನೆನಪಿನ ಜೊತೆಯಲ್ಲಿ ಎಲ್ಲ ವಿವರಗಳು ಸಲೀಸಾಗಿ ಹರಿದು ಬರುವುವು. ಮತ್ತೆ ಮತ್ತೆ ಕಲಿತದ್ದನ್ನು ನೆನಪಿಗೆ ತಂದುಕೊಳ್ಳಬೇಕು ಸಂಗಡಿಗರೊಂದಿಗೆ ಚರ್ಚಿಸುತ್ತಿರಬೇಕು.

ಅನೇಕರಿಗೆ ಗಂಟೆಗಟ್ಟಲೆ ಕೂತು ಓದಲು ಸಾಧ್ಯವಾಗದು. ಐದು-ಹತ್ತು ನಿಮಿಷಗಳಲ್ಲಿ ಬೇಸರ ಬಂದುಬಿಡುತ್ತದೆ. ಆಕಳಿಸಿ, ಮೈಮುರಿದು, ಎದ್ದು ಅತ್ತ-ಇತ್ತ ಓಡಾಡಿ, ಯಾವುದೋ ರಾಗವನ್ನು ಗುನುಗಿ ಮತ್ತೆ ಓದಲು ಪ್ರಾರಂಭಿಸುತ್ತಾರೆ. ಓದಿನ ಮಧ್ಯೆ ಅಲ್ಪವಿರಾಮ ಒಳ್ಳೆಯದು. ಆದರೆ ಅದು ದೀರ್ಘವಿರಾಮಕ್ಕೆ ತಿರುಗಬಾರದು. ಗಂಟೆಗಟ್ಟಲೆ ಕುಳಿತು ಓದುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಪರೀಕ್ಷಾ ಕೊಠಡಿಯಲ್ಲಿ ವಿದ್ಯಾರ್ಥಿಗಳು ಸುಮಾರು ಮೂರು ಗಂಟೆಗಳ ಕಾಲ ಸದ್ದು ಮಾಡದೇ ಕುಳಿತು ಬರೆಯಬೇಕಾಗುತ್ತದೆ. ಏಳಲು, ಆಕಳಿಸಲು, ಮೈ ಮುರಿಯಲು ಇಲ್ಲಿ ಅವಕಾಶವಿರುವುದಿಲ್ಲ. ಮೇಲ್ವಿಚಾರಕರು ವಿದ್ಯಾರ್ಥಿಯ ಚಟುವಟಿಕೆಯನ್ನು ಗಮನಿಸುತ್ತಿರುತ್ತಾರೆ. ತಜ್ಞರ ಸಲಹೆಯ ಪ್ರಕಾರ ಕನಿಷ್ಠ ಒಂದು ಗಂಟೆಯಾದರೂ ಕುಳಿತು ಓದಿ ತರುವಾಯ ಒಂದೆರಡು ನಿಮಿಷ ಗಾಳಿಯಲ್ಲಿ ಅಡ್ಡಾಡಿ ಮತ್ತೆ ಓದಲು ತೊಡಗಬಹುದು. ಈ ಅಲ್ಪವಿರಾಮದ ಅವಧಿಯಲ್ಲಿ ಈಗತಾನೇ ಓದಿದ ವಿಷಯವನ್ನು ಮೆಲುಕು ಹಾಕಿ, ಮುಖ್ಯ ವಿಚಾರಗಳನ್ನು ಸ್ಮರಿಸಿಕೊಳ್ಳುವುದು. ಒಟ್ಟಿನಲ್ಲಿ ಅಲ್ಪವಿರಾಮ ದೀರ್ಘವಿರಾಮವಾಗದಂತೆ ಮತ್ತು ಚರ್ಚೆ ಕಾಡು-ಹರಟೆಯಲ್ಲಿ ಅಪವ್ಯಯವಾಗದಂತೆ ಎಚ್ಚರವಹಿಸಬೇಕು.

ಓದುವಾಗ ಮುಖ್ಯ ವಿಷಯಗಳನ್ನು, ವಿಚಾರಗಳನ್ನು ಚಿಕ್ಕ ಪುಸ್ತಕವೊಂದರಲ್ಲಿ ಬರೆದಿಟ್ಟುಕೊಳ್ಳಬಹುದು. ಪರೀಕ್ಷೆಯ ಸಮಯದಲ್ಲಿ ವಿದ್ಯಾರ್ಥಿಯು ಈ ಸಣ್ಣ ಪುಟ್ಟ ಟಿಪ್ಪಣಿಗಳ ಮೇಲೆ ಕಣ್ಣಾಡಿಸಿದರೂ ಸಾಕಾಗುವುದು. ಮುಖ್ಯವಾಗಿ ಯಾವುದೇ ವಿಷಯದ ಮುಖ್ಯ ತಿರುಳು ಮತ್ತು ಸಾರಾಂಶ ಗ್ರಹಿಕೆಗೆ ಬರಬೇಕು. ತಿರುಳು ಸಿಕ್ಕರೆ ವಿಚಾರ ಮಂಡನೆಗೆ ಸುಲಭವಾಗುವುದು

ಓದಲು ಹುರುಪು ಸಿಗಬೇಕಾದರೆ ಪರಿಸರ ಅದಕ್ಕೆ ಅನುಕೂಲವಾಗಿರಬೇಕು. ಪ್ರತ್ಯೇಕ ಕೊಠಡಿಯಿದ್ದರೂ ವಿದ್ಯಾರ್ಥಿಯ ಮನಸ್ಸನ್ನು ಬೇರೆಡೆ ಸೆಳೆಯುವಂತಹ ಅಹಿತಕರ ಚಟುವಟಿಕೆಗಳು ಹೊರಗೆ ನಡೆಯುತ್ತಿದ್ದರೆ ಆ ಕೊಠಡಿಯಿದ್ದು ಪ್ರಯೋಜನವಿಲ್ಲ. ತಂದೆ ತಾಯಿಗಳು ವಿದ್ಯಾರ್ಥಿಯ ಅಧ್ಯಯನಕ್ಕೆ ಹಿತಕರವಾದ

www.prepp.in

Prepp Your Personal Exams Guide



ಪರಿಸರವನ್ನೊದಗಿಸಲು ಸಹಕರಿಸಬೇಕು. ಮಕ್ಕಳ ಒದಿಗೆ ಪಾಲಕರು ಬೇಸರಗೊಳ್ಳದೆ ಎಲ್ಲ ರೀತಿಯಲ್ಲೂ ಪ್ರೋತ್ಸಾಹ ನೀಡಬೇಕು. ಅದರ ಅಭ್ಯುದಯಕ್ಕೆ ಕುಳಿತಾಗ ಯಾವುದೇ ಅಡ್ಡಿ ಆತಂಕ ಒದಗದಂತೆ ನೋಡಿಕೊಳ್ಳಬೇಕು. ಅಧ್ಯಯನಕ್ಕೊಂದು ಸಮಯವನ್ನು ಮೀಸಲಿಟ್ಟಿದ್ದರೆ ಅದನ್ನು ಪಾಲಕರು ಗೌರವಿಸಬೇಕು. ಸಾಧ್ಯವಾದರೆ ವಿದ್ಯಾರ್ಥಿಯ ಪಕ್ಕ ಕುಳಿತು ಕಷ್ಟವೆಂದಿರುವ ವಿಷಯವನ್ನು ಬೋಧಿಸಿ ಬೆನ್ನು ತಟ್ಟಿ ಧೈರ್ಯ ತುಂಬಬೇಕು. ಎಲ್ಲಕ್ಕಿಂತ ಮುಖ್ಯವಾದುದೆಂದರೆ ಮನೆಯಲ್ಲಿ ವಿದ್ಯಾರ್ಥಿಗಳ ಅಧ್ಯಯನಕ್ಕೆ ಅಗತ್ಯವಾದ ವಾತಾವರಣವನ್ನು ಒದಗಿಸಬೇಕು. ಅವನ ಅಧ್ಯಯನಕ್ಕೆ ಆತಂಕವನ್ನೊಡ್ಡುವ ಯಾವುದೇ ಚಟುವಟಿಕೆಯನ್ನು ನಡೆಸಬಾರದು.

**2. ಲೇಖನವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ: 15**

ಮಾನವ ಸ್ವಾಭಾವಿಕವಾಗಿ ಸಂಘ ಜೀವಿ. ಈ ಸಂಘ ಜೀವನದ ಫಲವಾಗಿ ಸಂಘಟಿತ ಸಮಾಜವು ಅಸ್ತಿತ್ವಕ್ಕೆ ಬಂದಿದೆ. ಈ ಸಮಾಜದಲ್ಲಿ ಪ್ರತಿಯೊಬ್ಬನು ಸಮಾನ ಜೀವನದ ಗುರಿ ಹೊಂದಿರುತ್ತಾನೆ. ಸಂಘಟಿತ ಜೀವನದ ಸಮಾಜದಲ್ಲಿ ಮಾನವನ ಗುರಿಯೆಂದರೆ ಉತ್ತಮ ಹಾಗೂ ಒಳ್ಳೆಯ ಜೀವನ ನಡೆಸುವುದೇ ಆಗಿದೆ. ಸಮಾಜದಲ್ಲಿ ವ್ಯಕ್ತಿ ಮತ್ತು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಮತ್ತು ಉತ್ತಮ ಜೀವನವನ್ನು ಸಾಧಿಸುವಂತಹ ಸನ್ನಿವೇಶ ಮತ್ತು ಸದಾವಕಾಶವನ್ನು ಕಲ್ಪಿಸಿಕೊಡುವ ಹೊಣೆ ರಾಜ್ಯಕ್ಕೆ ಸೇರಿದೆ. ಮೂಲಭೂತ ಕರ್ತವ್ಯಗಳು ಇಂತಹ ವಾತಾವರಣವನ್ನು ಸೃಷ್ಟಿಸುತ್ತವೆ.

ಹಕ್ಕು ಮತ್ತು ಕರ್ತವ್ಯಗಳ ನಡುವೆ ನಿಕಟವಾದ ಸಂಬಂಧವಿದೆ. ಪ್ರತಿಯೊಂದು ಹಕ್ಕು ಸಹ ಕರ್ತವ್ಯದಿಂದ ಕೂಡಿರುತ್ತದೆ. ಹಕ್ಕು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಪ್ರತಿಯೊಂದು ಹಕ್ಕು ಸಹ ಕರ್ತವ್ಯವನ್ನು ಹಿಂಬಾಲಿಸುತ್ತದೆ. ಅಂದರೆ ಪ್ರತಿಯೊಂದು ಹಕ್ಕು ಕರ್ತವ್ಯದಿಂದಲೇ ಆರಂಭವಾಗಿ ಕರ್ತವ್ಯದಿಂದಲೇ ಅಂತ್ಯಗೊಳ್ಳುತ್ತದೆ ಎನ್ನಬಹುದಾಗಿದೆ. ಹಕ್ಕುಗಳು ಇರುವುದರಿಂದಲೇ ಕರ್ತವ್ಯಗಳು ಹುಟ್ಟಿಕೊಂಡಿವೆ. ಕರ್ತವ್ಯಗಳಿಲ್ಲದೆ ಹಕ್ಕುಗಳನ್ನು ಅನುಭವಿಸುವುದು ಸಾಧ್ಯವಿಲ್ಲ. ಕರ್ತವ್ಯವಿಲ್ಲದೆ ಹಕ್ಕುಗಳು ಮದುಮಗನಿಲ್ಲದ ಮದುವೆಯಂತೆ. ಪ್ರಜೆಯಾದವನು ತಾನು ಅನುಭವಿಸುವ ಪ್ರತಿಯೊಂದು ಹಕ್ಕಿಗೂ ಪ್ರತಿಯಾಗಿ ಕರ್ತವ್ಯವನ್ನು ಪಾಲಿಸಲೇಬೇಕಾಗುತ್ತದೆ. ಮನುಷ್ಯನನ್ನು ಅವನ ನೆರಳು ಹಿಂಬಾಲಿಸುವಂತೆ ಹಕ್ಕುಗಳು ಕರ್ತವ್ಯಗಳನ್ನು ಹಿಂಬಾಲಿಸುತ್ತವೆ. ಪ್ರಜೆ ಆದವನು ತನ್ನ ಹಕ್ಕುಗಳನ್ನು ಅನುಭವಿಸಿ ಇತರರ ಹಕ್ಕುಗಳನ್ನು ಗೌರವಿಸಬೇಕು. ಇದು ಅವನ ಕರ್ತವ್ಯವಾಗಿರುತ್ತದೆ. ಪ್ರಜೆ ಅದವನಿಗೆ ಜೀವಿಸುವ ಹಕ್ಕಿದೆ ಎಂದರೆ ಇತರರು ಆತನ ದೇಹಕ್ಕೆ ಹಾನಿಯುಂಟುಮಾಡಬಾರದೆಂದು ಇದರ ಅರ್ಥ. ಹಾಗೆಯೇ ಇತರರಿಗೂ ಜೀವಿಸುವ ಹಕ್ಕಿದೆ ಎಂದರೆ ಆತನೂ ಇತರೆಯವರ ಜೀವಕ್ಕೆ ಹಾನಿಯನ್ನುಂಟುಮಾಡುವಂತಿಲ್ಲ. ಇದು ಅವನ ಕರ್ತವ್ಯ, ಒಬ್ಬ ಪ್ರಜೆ ಕೆಲವು ಹಕ್ಕುಗಳನ್ನು ಪಡೆದಿದ್ದರೆ ಇತರರು ಅಂತಹ ಹಕ್ಕುಗಳನ್ನು ಸಮಾನ ರೀತಿಯಲ್ಲಿಯೇ ಪಡೆದಿರುತ್ತಾರೆ. ಪ್ರತಿಯೊಬ್ಬರ ಹಕ್ಕುಗಳ ಬಗ್ಗೆ ಪರಸ್ಪರ ಗೌರವ ಹೊಂದಿರಲೇಬೇಕು. ಪ್ರಜೆಗಳು ಕರ್ತವ್ಯಬದ್ಧರಾಗಿದ್ದರೆ ಸಮಾಜದಲ್ಲಿ ಘರ್ಷಣೆಗಳು ಕಡಿಮೆಯಾಗುವುದರ ಬದಲು ವೃದ್ಧಿಯಾಗುತ್ತವೆ. ಪ್ರಜೆಗಳ ಜ್ಞಾನವೇ ಸಾಮಾಜಿಕ ಜೀವನದ ಬುನಾದಿ.

ಪೌರರು ಹಕ್ಕುಗಳ ರೂಪದಲ್ಲಿ ತೆಗೆದುಕೊಂಡದ್ದನ್ನು ಕರ್ತವ್ಯಗಳ ರೂಪದಲ್ಲಿ ತೀರಿಸಬೇಕಾಗುತ್ತದೆ. ರಾಜ್ಯವು ಪೌರರಿಗೆ ಒಂದು ಹಸ್ತದಿಂದ ಹಕ್ಕುಗಳನ್ನು ಕೊಟ್ಟು ಮತ್ತೊಂದು ಹಸ್ತದಿಂದ ಅವರಿಂದ ಕರ್ತವ್ಯಗಳನ್ನು ನಿರೀಕ್ಷಿಸುತ್ತದೆ. ಹಕ್ಕು ಮತ್ತು ಕರ್ತವ್ಯಗಳು ಪರಸ್ಪರ ಪೂರಕವಾಗಿವೆ, ಪೋಷಕವಾಗಿವೆ. ಪ್ರಜೆಗಳು ಕರ್ತವ್ಯಗಳನ್ನು ಪಾಲಿಸುವುದರಿಂದಲೇ ಅವರಿಗೆ ಹಕ್ಕುಗಳು ಲಭಿಸಿವೆ.

www.prepp.in



Prepp
Your Personal Exams Guide

ಪ್ರಾರಂಭದಲ್ಲಿ ಮೂಲಭೂತ ಕರ್ತವ್ಯಗಳ ಬಗ್ಗೆ ಸಂವಿಧಾನದಲ್ಲಿ ಏನನ್ನು ಉಲ್ಲೇಖಿಸದಿದ್ದರೂ ಅನಂತರ ಮೂಲಭೂತ ಹಕ್ಕುಗಳ ಜೊತೆಯಲ್ಲಿ ಮೂಲಭೂತ ಕರ್ತವ್ಯಗಳ ಬಗ್ಗೆಯೂ ಸಂವಿಧಾನದಲ್ಲಿ ಪ್ರಸ್ತಾಪಿಸಲಾಗಿದೆ. ಅಂದರೆ 1976ರಲ್ಲಿ 42ನೇ ತಿದ್ದುಪಡಿಯ ಮೂಲಕ ಇವುಗಳನ್ನು ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಸಂವಿಧಾನದ ನಾಲ್ಕನೆಯ ವಿಭಾಗ ಮತ್ತು 51ಎ ವಿಧಿಯ ಪ್ರಕಾರ ಭಾರತದ ನಾಗರೀಕತೆ ಕೆಳಕಂಡ 10 ಪ್ರಮುಖ ಕರ್ತವ್ಯಗಳನ್ನು ನಿಗದಿಪಡಿಸಲಾಗಿದೆ.

1. ಭಾರತ ಸಂವಿಧಾನ, ರಾಷ್ಟ್ರಧ್ವಜ, ರಾಷ್ಟ್ರಗೀತೆ ಮತ್ತು ರಾಷ್ಟ್ರ ಮುದ್ರೆಗಳಿಗೆ ಗೌರವ ತೋರಿಸುವುದು ಪ್ರತಿಯೊಬ್ಬ ನಾಗರೀಕನ ಪ್ರಮುಖ ಕರ್ತವ್ಯವಾಗಿದೆ. ಸಂವಿಧಾನದ ಉದಾತ್ತ ಆದರ್ಶಗಳನ್ನು ಅನುಸರಿಸಿ ನಡೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ಸಂವಿಧಾನದಲ್ಲಿ ಹೇಳಲಾಗಿದೆ.
2. ಭಾರತದ ಪರಮಾಧಿಕಾರ, ಐಕ್ಯತೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯುವುದು ಮತ್ತು ಸಂರಕ್ಷಿಸುವುದು ನಾಗರೀಕರ ಕರ್ತವ್ಯವಾಗಿದೆ.
3. ನಮ್ಮ ದೇಶದ ಸ್ವಾತಂತ್ರ್ಯ ಹೋರಾಟಗಾರರು ಬಿಟ್ಟು ಹೋಗಿರುವ ಉದಾತ್ತ ಧ್ಯೇಯಗಳನ್ನು ಪಾಲಿಸುವುದರೊಂದಿಗೆ ಅವರ ಪ್ರಶ್ನೋತ್ತರಗಳ ಸಾಧನೆಗೆ ಸರ್ವ ಪ್ರಯತ್ನಗಳನ್ನು ಮಾಡುವುದು ಪ್ರತಿಯೊಬ್ಬ ಭಾರತೀಯನ ಪ್ರಮುಖ ಕರ್ತವ್ಯವಾಗಿದೆ.
4. ಅನಿವಾರ್ಯ ಪರಿಸ್ಥಿತಿಯಲ್ಲಿ ದೇಶಸೇವೆ ಮಾಡುವ ಮೂಲಕ ರಾಷ್ಟ್ರವನ್ನು ರಕ್ಷಿಸಬೇಕು. ಅಂದರೆ ರಾಷ್ಟ್ರದ ರಕ್ಷಣೆಗಾಗಿ ಮತ್ತು ರಾಷ್ಟ್ರದ ಸೇವೆಗಾಗಿ ತನ್ನನ್ನು ತಾನೇ ಅರ್ಪಿಸುಕೊಳ್ಳುವ ಪ್ರಮುಖ ಕರ್ತವ್ಯ ಪ್ರತಿಯೊಬ್ಬ ಭಾರತೀಯ ನಾಗರೀಕನದ್ದಾಗಿದೆ.
5. ಯಾವುದೇ ಜಾತಿ, ಧರ್ಮ, ಭಾಷೆ, ಜನಾಂಗ, ಪ್ರಾದೇಶಿಕತೆ ಮೊದಲಾದ ಅಂಶಗಳಿಗೆ ಅವಕಾಶ, ನಡತೆ ಎಲ್ಲಾ ಭಾರತೀಯರಲ್ಲಿ ಐಕ್ಯತೆ ಮತ್ತು ಸಹೋದರ ಭಾವನೆ ಚೇತನಗೊಳ್ಳವಂತೆ ಪ್ರತಿಯೊಬ್ಬರು ಸತತವಾಗಿ ಪರಿಶ್ರಯಿಸಬೇಕು. ಅಲ್ಲದೇ ಮಹಿಳೆಯರ ಗೌರವಕ್ಕೆ ಯಾವುದೇ ರೀತಿಯ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು.
6. ವಿವಿಧತೆಯಿಂದ ಕೂಡಿ ಸಾಮಾಜಿಕ ಅನುವಂಶಕತೆಯಿಂದ ಬಳುವಳಿಯಾಗಿ ಬಂದಿರುವ ಭಾರತದ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.
7. ಅರಣ್ಯ, ನದಿ, ಸರೋವರಗಳು, ಗಿರಿಶಿಖರಗಳು ಮತ್ತು ವನ್ಯಜೀವಿಗಳಿಂದ ಕೂಡಿದ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಮತ್ತು ಸುಧಾರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ತಿಳಿಸಲಾಗಿದೆ.
8. ವೈಜ್ಞಾನಿಕ ಪ್ರವೃತ್ತಿ ಮತ್ತು ಮನೋಭಾವನೆ, ಮಾನವೀಯತೆಯ ಮತ್ತು ಸುಧಾರಣೆ ಪ್ರವೃತ್ತಿಗಳನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳುವುದು ಅತ್ಯಂತ ಪ್ರಮುಖ ಕರ್ತವ್ಯವಾಗಿದೆ.
9. ಹಿಂಸೆಯಿಂದ ದೂರವಿದ್ದು, ರಾಷ್ಟ್ರೀಯ ಮತ್ತು ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.
10. ಎಲ್ಲಾ ವೈಯಕ್ತಿಕ ಮತ್ತು ಸಾಮಾಜಿಕ ಚಟುವಟಿಕೆಯ ಕಾಯಕ್ಷೇತ್ರಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸುವುದರ ಮೂಲಕ ರಾಷ್ಟ್ರದ ಉನ್ನತಿಗೆ ಶ್ರಮಿಸುವುದು ನಾಗರೀಕರ 10ನೇ ಮುಖ್ಯ ಕರ್ತವ್ಯವಾಗಿದೆ.

www.prepp.in



ಹೀಗೆ 10 ಪ್ರಮುಖ ಮೂಲಭೂತ ಕರ್ತವ್ಯಗಳನ್ನು 51 (ಎ) ವಿಧಿಯಲ್ಲಿ ಅಳವಡಿಸಲಾಗಿದೆ. ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು ವ್ಯಕ್ತಿಯ ವ್ಯಕ್ತಿತ್ವ ವಿಕಾಸದಲ್ಲಿ ಅತ್ಯಂತ ಪ್ರಮುಖವಾದ ಪಾತ್ರಗಳನ್ನು ವಹಿಸುತ್ತವೆ.

ಒಟ್ಟಿನಲ್ಲಿ ಪ್ರಜಾಪ್ರಭುತ್ವದ ಯಶಸ್ಸಿಗೆ ಮತ್ತು ವ್ಯಕ್ತಿತ್ವದ ಸರ್ವತೋಮುಖ ಅಭಿವೃದ್ಧಿಗೆ ಮೂಲಭೂತ ಹಕ್ಕುಗಳು ಮತ್ತು ಮೂಲಭೂತ ಕರ್ತವ್ಯಗಳು ಅತ್ಯಗತ್ಯವೆನ್ನುವುದು ಈ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ. ಮೂಲಭೂತ ಹಕ್ಕುಗಳನ್ನು ಸಂವಿಧಾನದ ಮೂರನೆಯ ಭಾಗದ ಅಂದರೆ 12 ರಿಂದ 35ರ ವಿಧಿಗಳ ಮೂಲಕ ಅಳವಡಿಸಿಕೊಳ್ಳಲಾಗಿದ್ದರೆ, ಮೂಲಭೂತ ಕರ್ತವ್ಯಗಳನ್ನು ಸಂವಿಧಾನದ ನಾಲ್ಕನೆಯ ವಿಭಾಗ 51(ಎ) ವಿಧಿಯ ಮೂಲಕ ಪ್ರಸ್ತಾಪಿಸಲಾಗಿದೆ. ಮೂಲಭೂತ ಹಕ್ಕುಗಳನ್ನು ರಕ್ಷಿಸಲು ನ್ಯಾಯಾಲಯದಲ್ಲಿ ಪ್ರಶ್ನಿಸುವ ಅವಕಾಶವಿದೆ. ಅಂದರೆ ಮೂಲಭೂತ ಕರ್ತವ್ಯಗಳನ್ನು ಉಲ್ಲಂಘಿಸಿದವರ ವಿರುದ್ಧ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ. ಈ ಎರಡು ಅಂಶಗಳು ವ್ಯಕ್ತಿಯ ಮತ್ತು ದೇಶದ ಹಿತದೃಷ್ಟಿಯಿಂದ ಅನಿವಾರ್ಯವಾಗಿವೆ.

**ಪ್ರಶ್ನೆಗಳು:**

1) ಮಾನವನು ಸಂಘಟಿತ ಜೀವನದ ಗುರಿ ಸಾಧನೆಗೆ ಏನು ಮಾಡಬೇಕು.
2) ಹಕ್ಕು ಮತ್ತು ಕರ್ತವ್ಯಗಳ ಸಂಬಂಧವನ್ನು ತಿಳಿಸಿರಿ.
3) ಮೂಲಭೂತ ಕರ್ತವ್ಯಗಳು ಸಂವಿಧಾನಾತ್ಮಕ ರೂಪವನ್ನು ಹೇಗೆ ಪಡೆದಿದೆ.
4) 5 ಪ್ರಮುಖ ಕರ್ತವ್ಯಗಳನ್ನು ಬರೆಯಿರಿ.
5) ಲೇಖನವನ್ನು ಓದಿ ಸೂಕ್ತ ಶಿರೋನಾಮ ತಿಳಿಸಿರಿ.

**3. ಆಯಾ ಗುಂಪಿಗೆ ಸೇರದ ಪದವನ್ನು ಗುರುತಿಸಿ:** **5**

1. ಅ) ಹೆಜ್ಜೇನು ಆ) ಬೆಳ್ಳೊಡೆ ಇ) ನಿಟ್ಟುಸಿರು ಈ) ತಲೆತಗ್ಗಿಸು
2. ಅ) ಆವೆ ಆ) ಜಾಣ್ಮೆ ಇ) ಕೂರ್ಮೆ ಈ) ಪೆರ್ಮೆ
3. ಅ) ಅಂಬುದೀ ಆ) ವಾರಿಧೀ ಇ) ಬುನಾದಿ ಈ) ಜಲಧಿ
4. ಅ)ಷಣ್ಮುಖ ಆ) ವಿಮುಖ ಇ) ಚತುರ್ಮುಖ ಈ) ದಶಮುಖ
5. ಅ) ಮಂಚ ಆ) ಕೆಂಚ ಇ) ಕರಿಯ ಈ) ಕುಳ್ಳ

**4. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇಯ ಪದಕ್ಕೆ ಸಂಬಂಧಿಸಿದ ಪದಗಳನ್ನು ಬರೆಯಿರಿ:** **5**

ಅ) ಇಂದ್ರ: ಸಹಸ್ರಾಕ್ಷ : ಈಶ್ವರ:
ಆ) ಠಾಕೂರರ ಜನನ: 2-5-1861: ಮಹಾತ್ಮಗಾಂಧಿಜಿ ಜನನ:
ಇ) ದಾತೃ: ದಾತಾರ: ಪ್ರಸಾದ:
ಈ) ಕುಣಿ: ಕುಣಿತ: ತುಳಿ:
ಉ) ಗಾಣಿಗ: ಗಾಣಗಿತ್ತಿ: ಮದುವಣಿಗ:

www.prepp.in



Prepp
Your Personal Exams Guide

ಭಾಗ–ಬಿ

5. ಲೆಕ್ಕ ನಿಯಂತ್ರಣಾಧಿಕಾರಿ, ಬೆವಿಕಂ, ಚಿತ್ರದುರ್ಗ, ವಲಯರವರು ತಮ್ಮ ಪರಿವೀಕ್ಷಣೆ ಸಮಯದಲ್ಲಿ ಅಕೌಂಟ್ಸ್ ಮ್ಯಾನುವಲ್ ಸೂಚನೆ ಅನ್ವಯ ತಿಜೊರಿ ಬೀಗದ ಕೈಗಳು (cash chest key) ಸುರಕ್ಷತೆ ನಿಮ್ಮಿತ್ತ ಕಾಲಮಿತಿ ಅನುಸಾರ ನಕಲು ಬೀಗದ ಕೈಗಳ ಪರೀಕ್ಷೆ ಮಾಡದಿರುವುದನ್ನು ಗಮನಿಸಿರುವರು. ಈ ಕುರಿತು ಅವರ ವಲಯ ವ್ಯಾಪ್ತಿಯ ಅಧಿಕಾರಿಗಳಿಗೆ ಸೂಕ್ತ ಸುತ್ತೋಲೆ ಸೂಚನೆಯನ್ನು ಹೊರಡಿಸಿ. 5

6. ಉಪಲೆಕ್ಕ ನಿಯಂತ್ರಣಾಧಿಕಾರಿ ಪ್ರಸರಣ (ಕಾ & ನಿ) ವೃತ್ತ ದಾವಣಗೆರೆ ರವರು ವಿಭಾಗಗಳ ಪರಿವೀಕ್ಷಣೆ ಸಮಯದಲ್ಲಿ ಆಸ್ತಿಗಳ ಕೆಟಗರೈಜೆಷನ್ (assets categorisation) ನಿಯಮಾನುಸಾರ ಹಾಗೂ ಮಾರ್ಗದರ್ಶಗಳನ್ವಯ ಮಾಡದಿರುವುದನ್ನು ಗಮನಿಸಿರುವರು. ಸಂಬಂಧಿಸಿದ ವಿಭಾಗಗಳಿಗೆ ಈ ಕುರಿತು ಸೂಕ್ತ ಪತ್ರ ಬರೆಯಿರಿ. 5

7. ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ಪೀಣ್ಯ ಉಪವಿಭಾಗ ಬೆವಿಕಂ ರವರು ಆರ್.ಆರ್.ಡಾಕೆಟ್‌ಗಳ ವಿವರಗಳನ್ನು ನಮೂದಿತ ರಿಜಿಸ್ಟರ್‌ಗಳಲ್ಲಿ ದಾಖಲಿಸದಿರುವುದನ್ನು ಮತ್ತು ಆರ್.ಆರ್.ಡಾಕೆಟ್‌ಗಳನ್ನು ನಿಗಧಿತ ಸಮಯಲ್ಲಿ ಕಂದಾಯ ಶಾಖೆಗೆ ಸಲ್ಲಿಸದಿರುವುದನ್ನು ಗಮನಿಸಿರುವರು ಹಾಗು ಕಂದಾಯ ಶಾಖೆಯವರು ಆರ್.ಆರ್.ಡಾಕೆಟ್‌ಗಳನ್ನು ಸ್ವೀಕರಿಸಿದ ನಂತರ ಲೆಡ್ಜರ್ ಖಾತೆಯನ್ನು ತೆರೆಯುವುದರಲ್ಲಿ ವಿಳಂಬವಾಗುತ್ತಿರುವುದನ್ನು ಗಮನಿಸಿರುವರು. ಆದ್ದರಿಂದ ಸೂಕ್ತ ಕ್ರಮಕ್ಕಾಗಿ ಸಂಬಂಧಿಸಿದವರಿಗೆ ಪತ್ರ ಬರೆಯಿರಿ. 5

8. ಅಧೀಕ್ಷಕ ಇಂಜಿನಿಯರ್ ವಿದ್ಯುತ್ ಪ್ರಸರಣ (ಕಾ & ನಿ) ವೃತ್ತ ದಾವಣಗೆರೆರವರು ತಮ್ಮ ವೃತ್ತ ವ್ಯಾಪ್ತಿಯ 55 ಸಂಖ್ಯೆಯ 66/11ಕೆ.ವಿ ಉಪಕೇಂದ್ರಗಳಿಗೆ ಪಾಳಿ ಕೆಲಸ ಮತ್ತು ಸಣ್ಣ ನಿರ್ವಹಣೆ ಕೆಲಸ ಒದಗಿಸಲು (shift duties and minor manitance works) ಒಂದು ವರ್ಷದ ಅವಧಿಗೆ (1.11.2012 ರಿಂದ 31.10.2013) ಅರ್ಹಗುತ್ತಿಗೆದಾರರಿಂದ ಶಾರ್ಟ್ ಟರ್ಮ (short term) ಇ ಟೆಂಡರ್ ಆಹ್ವಾನಿಸಿ ಹೊರಡಿಸುವ ಅಧಿಸೂಚನೆಯನ್ನು ತಯಾರಿಸಿರಿ. 10

9. ಆರ್ಥಿಕ ಸಲಹೆಗಾರರು (ಲೆ & ಸಂ) ಕವಿಪ್ರನಿನಿ, ಬೆಂಗಳೂರು ರವರಿಂದ ಕವಿಪ್ರನಿನಿ/ವಿಸಕಂಗಳ ಅಧಿಕಾರಿಗಳು/ನೌಕರರ ಸಂಬಳ ಮತ್ತು ಇತರೆ ಭತ್ಯೆಗಳನ್ನು ಕಡ್ಡಾಯವಾಗಿ ಬ್ಯಾಂಕ್ ಖಾತೆಗಳ ಮುಖಾಂತರ ಪಾವತಿಸಲು ಸುತ್ತೋಲೆ ಸೂಚನೆ ಹೊರಡಿಸಿ. 5

10. ಕವಿಮಂ ನೌಕರರ ಸೇವೆ (ನಡವಳಿಕೆ) ನಿಯಮ 1988 ಸೆಕ್ಷನ್ 23ರನ್ವಯ ಎಲ್ಲಾ ಅಧಿಕಾರಿಗಳು/ನೌಕರರು 2012ನೇ ಕ್ಯಾಲಂಡರ್ ವರ್ಷಕ್ಕೆ ಸಂಬಂಧಿಸಿದಂತೆ ಚರಸ್ಥಿರ ಆಸ್ತಿಗಳ ಮಾಹಿತಿಯನ್ನು ನಿಗಧಿತ ಸಮಯದೊಳಗೆ ಸಲ್ಲಿಸುವಂತೆ ನಿರ್ದೇಶಕರು (ಆ & ಮಾ.ಸಂ) ರವರಿಂದ ಸೂಕ್ತ ಸೂಚನೆಯೊಂದಿಗೆ ಸುತ್ತೋಲೆ ಹೊರಡಿಸಿ. 5

www.prepp.in



Prepp
Your Personal Exams Guide

**11.** 2012-13ನೇ ಸಾಲಿನಲ್ಲಿ ವಿವಿಧ ವೋಲ್ಟೇಜ್ ನ 300 ವಿದ್ಯುತ್ ಉಪಕೇಂದ್ರಗಳ ಸ್ಥಾಪಿಸುವ ಗುರಿ ಸಾಧನೆಯ ನಿಟ್ಟಿನಲ್ಲಿ ವಲಯ ಮುಖ್ಯ ಇಂಜಿನಿಯರ್ (ವಿ) ಕವಿಪ್ರನಿನಿ ರವರುಗಳು ವೈಯಕ್ತಿಕ ಉಸ್ತುವಾರಿ ವಹಿಸಿ ಉಪಕೇಂದ್ರಗಳ ಕಾರ್ಯಾರಂಭಗೊಳ್ಳುವುದನ್ನು ಖಾತರಿಪಡಿಸಿಕೊಳ್ಳಲು ಹಾಗು ಈ ಪ್ರಯತ್ನದತ್ತ ಪ್ರತಿ ಎರಡು ದಿನಗಳಿಗೊಮ್ಮೆ ಉಪಕೇಂದ್ರಗಳ ಚಾಲನೆಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತೆ ಮತ್ತು ಅನುಸರಣೆ ವರದಿಯನ್ನು ಪ್ರತಿವಾರವೂ ಅರೆ ಸರ್ಕಾರಿ ಪತ್ರ ಮುಖೇನ ಕಳಿಸುವಂತೆ ನಿರ್ದೇಶಕರು(ತಾಂತ್ರಿಕ), ಕವಿಪ್ರನಿನಿ, ಬೆಂಗಳೂರು, ರವರಿಂದ ವಲಯ ಮುಖ್ಯ ಇಂಜಿನಿಯರ್ ರವರು(ವಿ), ಕವಿಪ್ರನಿನಿ, ರವರುಗಳಿಗೆ ಅರೆ ಸರ್ಕಾರಿ ಪತ್ರ ಬರೆಯಿರಿ. **5**

**12.** ಪ್ರಸರಣ ಮಾರ್ಗ & ಉಪಕೇಂದ್ರ ವಿಭಾಗ ಹಾವೇರಿಯ ದೂರವಾಣಿ ಶಾಖೆಯಲ್ಲಿ ಮಾರ್ಗದಾಳು ಆಗಿರುವ ಶ್ರೀ. Xyz ರವರು ಪದೇ ಪದೇ ಕೆಲಸಕ್ಕೆ ಗೈರು ಹಾಜರಾಗುವ ಪ್ರವೃತ್ತಿ ಹೊಂದಿದ್ದು ದಿನಾಂಕ 2-2-2012 ರಿಂದ ಯಾವುದೇ ಮಾಹಿತಿ ಇಲ್ಲದೆ ಕೆಲಸಕ್ಕೆ ಗೈರು ಹಾಜರಾಗಿರುತ್ತಾರೆ, ಸದರಿಯವರಿಗೆ ಕೆಲಸಕ್ಕೆ ಹಾಜರಾಗುವಂತೆ ತಿಳುವಳಿಕೆ ಸೂಚನೆ ಜಾರಿಗೊಳಿಸಿ( Recall Notice) **5**

**13.** ಪ್ರಸರಣ (ಕ & ನಿ) ವೃತ್ತ ತುಮಕೂರು ವ್ಯಾಪ್ತಿಯಲ್ಲಿ ರವಾನೆ ಶಾಖೆ ಉಸ್ತುವಾರಿಯಲ್ಲಿರುವ ಕಿರಿಯ ಸಹಾಯಕರೊಬ್ಬರು ಸ್ಟ್ಯಾಂಪ್ ರಿಜಿಸ್ಟರ್ ನಿರ್ವಹಣೆಯನ್ನು ಸರಿಯಾಗಿ ಮಾಡುತ್ತಿಲ್ಲ. ದಿನದ ಶಿಲ್ಕನ್ನು ದಾಖಲಿಸುತ್ತಿಲ್ಲ. ಪರಿವೀಕ್ಷಣೆ ಸಮಯದಲ್ಲಿ ಸ್ಟ್ಯಾಂಪ್ ಕಡಿಮೆ ಇರುವುದನ್ನು ಗಮನಿಸಲಾಗಿದೆ. ಸದರಿಯವರಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಿರಿ. **5**

**********

Prepp
Your Personal Exam Guide

Administrator
KPTCL Accounts Officers' Association
No. 28, Race Course Cross Road,
A.R. Circle, Bangalore - 560 009.